# ಕರ್ನಾಟಕ ವಿಧಾನ ಪರಿಷತ್ತು
## ನೂರ ಇಪ್ಪತ್ತೇಳನೆಯ ಅಧಿವೇಶನ
## <u>ಕಾರ್ಯಕಲಾಪಗಳ ಪಟ್ಟಿ</u>
### ಗುರುವಾರ, ದಿನಾಂಕ: 12ನೇ ಫೆಬ್ರವರಿ, 2015
### (ಸಮಯ: ಬೆಳಗ್ಗೆ 10.00 ಗಂಟೆಗೆ)

******

## 01. <u>ಪ್ರಶ್ನೋತ್ತರ</u>

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಎಂಟನೆಯ ಪಟ್ಟಿ
ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಎಂಟನೆಯ ಪಟ್ಟಿ

## 02. ಅರ್ಜಿಯನ್ನೊಪ್ಪಿಸುವುದು

**ಶ್ರೀ ಕೆ.ಬಿ. ಶಾಣಪ್ಪ** ಅವರು ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಅವರಗೆರೆ ಗ್ರಾಮಕ್ಕೆ ಸೇರಿದ ಸರ್ವೇ ನಂ: 371/1ರಲ್ಲಿ 2 ಎಕರೆ ಜಮೀನನ್ನು ಹರಿಜನ ಮತ್ತು ಗಿರಿಜನರ ಸ್ಮಶಾನಕ್ಕಾಗಿ ನೀಡಲಾಗಿತ್ತು. ಪುನ: ಆ ಜಮೀನನ್ನು ಸ್ಮಶಾನ ಜಾಗವೆಂಬುದನ್ನು ರದ್ದುಪಡಿಸಿ ಎಸ್.ಟಿ.ಪಿ. ಘಟಕ ಸ್ಥಾಪಿಸಲು ಆದೇಶ ಮಾಡಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುವುದು.

## 03. ಗಮನ ಸೆಳೆಯುವ ಸೂಚನೆಗಳು

**ಅ) ಶ್ರೀ ರಾಮಚಂದ್ರಗೌಡ** ಅವರು 2007ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸ ಪ್ರದೇಶಗಳು ಸೇರಿದ್ದರೂ ಸಹ ಸರ್ಕಾರಿ ಶಾಲೆ, ಆಸ್ಪತ್ರೆಗಳು, ಸರ್ಕಾರಿ ಆಸ್ತಿ ಮತ್ತು ನಾಗರೀಕ ಸೇವಾ ನಿವೇಶನಗಳು ಈವರೆವಿಗೂ ಪಾಲಿಕೆ ವ್ಯಾಪ್ತಿಗೆ ಹಸ್ತಾಂತರವಾಗದಿರುವ ಬಗ್ಗೆ **ಮಾನ್ಯ ಮುಖ್ಯಮಂತ್ರಿಯವರ** ಗಮನ ಸೆಳೆಯುವುದು.

**ಆ) ಶ್ರೀ ಟಿ.ಎ. ಶರವಣ** ಅವರು ತಿರುಪತಿ-ತಿರುಮಲ ದೇವಸ್ಥಾನದಲ್ಲಿನ ಕರ್ನಾಟಕ ಸರ್ಕಾರದ ಆಸ್ತಿಯನ್ನು ಆಂಧ್ರ ಸರ್ಕಾರದವರು ವಶಪಡಿಸಿಕೊಂಡಿರುವುದರಿಂದ, ಭಕ್ತಾದಿಗಳಿಗೆ ಉಂಟಾಗಿರುವ ಸಮಸ್ಯೆಯ ಬಗ್ಗೆ **ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರ** ಗಮನ ಸೆಳೆಯುವುದು.

## 04. ನಿಯಮ 330ರ ಮೇರೆಗೆ

**ಶ್ರೀಮತಿ ಮೋಟಮ್ಮ** ಅವರು ರಾಜ್ಯ ಮಹಿಳಾ ಪುನರ್ವಸತಿ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಕಲ್ಯಾಣ ಸಚಿವರು)**

..2

## 05. ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

| | |
|---|---|
| **ಶ್ರೀಯುತರುಗಳಾದ:**<br>**ಬಿ.ಜೆ. ಪುಟ್ಟಸ್ವಾಮಿ**<br>**ಕೆ.ಎಸ್. ಈಶ್ವರಪ್ಪ, ವಿ.ಪ.ನಾ**<br>**ಹಾಗೂ**<br>**ಕೆ.ಬಿ. ಶಾಣಪ್ಪ** | ಸಹಕಾರ ಸಂಘಗಳ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಮೀಸಲಾತಿಯಲ್ಲಿ ವಂಚನೆ ಮಾಡುತ್ತಿರುವ ಕುರಿತು ಪ್ರಸ್ತಾಪಿಸುವುದು. |

**ಭೋಜನ ವಿರಾಮದ ನಂತರ**

## 06. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

"2015ನೇ ಫೆಬ್ರವರಿ, 02ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ದಿನಾಂಕ: 04.02.2015ರಂದು ಡಾ: ಮತ್ತಿಕಟ್ಟಿ ವೀರಣ್ಣರವರು ಸೂಚಿಸಿದ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ.

(ನಾಲ್ಕನೇ ದಿನ)

**ವಿ. ಶ್ರೀಶ್**
**ಕಾರ್ಯದರ್ಶಿ**

---